

'ಅವತಾರ ಪುರುಷ' ಸಿನಿಮಾದಲ್ಲಿ ಆಶಿಕಾ ರಂಗನಾಥ್

## ಕೆಲಸದ ಹುರುಪು, ಅಪ್ಪು ಅಗಲಿಕೆ ನೋವು

ಲಾಕ್‌ಡೌನ್ ಆಗಿ ಈಗ ನಾವು ಯಾವ ವರ್ಷದಲ್ಲಿದ್ದೇವೆ ಅನ್ನೋದೇ ಮರೆತು ಹೋಗುವ ಹಾಗಾಗಿದೆ. ಈ ವರ್ಷದ ಆರಂಭ ಚೆನ್ನಾಗಿರಲಿಲ್ಲ. ಅರ್ಧ ವರ್ಷ ಲಾಕ್‌ಡೌನ್, ಕೊರೊನಾ ನಿಬಂಧನೆಗಳಲ್ಲಿಯೇ ಕಳೆದುಹೋಯಿತು. ನಂತರ ಚಿತ್ರಮಂದಿರಗಳು ತೆರೆದರೂ ಶೇ. 50ರಷ್ಟು ಮಾತ್ರವೇ ಅವಕಾಶ ಕೊಡಲಾಗಿತ್ತು. ಚಿತ್ರಮಂದಿರಗಳ ಸಮಸ್ಯೆ ಆಯ್ತು. ನಂತರದ ದಿನಗಳಲ್ಲಿ ನನಗೆ ಸಾಕಷ್ಟು ಪ್ರಾಜೆಕ್ಟ್‌ಗಳು ಬರಲಾರಂಭಿಸಿದವು. ಕೊನೆಯ ಎರಡು ತಿಂಗಳು ಸಾಕಷ್ಟು ಕೆಲಸ ಮಾಡಿದೆ. ಹಾಗೆಯೇ 'ಮುಗಿಲ್‌ಪೇಟೆ' ಮತ್ತು 'ಗರುಡ ಗಮನ ವೃಷಭ ವಾಹನ' ಸಿನಿಮಾಗಳಿಗೆ ನಾನು ಹಾಡಿದ ಹಾಡಿಗೆ ಒಳ್ಳೆಯ ಸ್ಪಂದನ ಸಿಕ್ಕಿತು. ನಾನು ಸಂಗೀತ ನಿರ್ದೇಶನ ಮಾಡಿರುವ 'ಬಡವ ರ್‍ಯಾಸ್ಕಲ್' ಕುರಿತೂ ಜನರು ಮಾತಾಡಿಕೊಳ್ಳುತ್ತಿದ್ದಾರೆ. ಅಣ್ಣಾವ್ರ ಆ್ಯನಿಮೇಷನ್ ಇಟ್ಟುಕೊಂಡು ಮಾಡಿದ 'ನಿನ್ನಂಥೋರ್‍ಯಾರೂ ಇಲ್ವಲ್ಲೋ' ಹಾಡನ್ನೂ ಜನರು ಮೆಚ್ಚಿಕೊಂಡರು.




ಪುನೀತ್ ಸರ್ ಸಾವು ಎಲ್ಲ ಖುಷಿಗಳನ್ನೂ ಕಸಿಯುವ ಹಾಗೆ ನನ್ನನ್ನು ಬಹುವಾಗಿ ಕಾಡಿತು. ಎಲ್ಲದರಲ್ಲಿಯೂ ಆಸಕ್ತಿ ಕಳೆದುಕೊಳ್ಳುವ ಹಾಗೆ ಮಾಡಿತು. ನಾನು ಕೆಲಸ ಮಾಡುವ ಎಲ್ಲ ತಂಡಗಳಿಗೂ ಅವರೊಂದು ರೀತಿ ಬೆನ್ನೆಲುಬಿನ ಹಾಗೆ ಇದ್ದರು. ಅವರ ನೆನಪಿನಲ್ಲಿಯೇ ಈ ವರ್ಷಕ್ಕೆ ವಿದಾಯ ಹೇಳಬೇಕಾಗಿದೆ.

**-ವಾಸುಕಿ ವೈಭವ್**

**ಗಾಯಕ, ಸಂಗೀತ ನಿರ್ದೇಶಕ**

ಸುದೀಪ್ ಅಭಿನಯದ 'ಕೋಟಿಗೊಬ್ಬ 3' ಸಿನಿಮಾ ಕೂಡ ಆಗಲೇ ಬಿಡುಗಡೆಗೊಳ್ಳಲು ಸಜ್ಜಾಗಿತ್ತು. 'ಸಲಗ' ಮತ್ತು 'ಕೋಟಿಗೊಬ್ಬ 3' ಸಿನಿಮಾಗಳು ಒಂದೇ ದಿನ ಬಿಡುಗಡೆಯಾಗುತ್ತಿರುವುದು ಗಾಂಧಿನಗರದಲ್ಲಿ ಸಂಚಲನ ಹುಟ್ಟಿಸಿತ್ತು. ಸುದೀಪ್ ಮತ್ತು ವಿಜಯ್ ಅಭಿಮಾನಿಗಳಿಬ್ಬರೂ ಚಿತ್ರಮಂದಿರಗಳ ದಾರಿಯಲ್ಲಿ ಜಮಾಯಿಸಿದ್ದರು.

ಅಕ್ಟೋಬರ್ 14ರಂದು ಚಿತ್ರಮಂದಿರಗಳಲ್ಲಿ ಬಿಡುಗೆಯಾದ 'ಸಲಗ'ನ ಘೀಳಿಗೆ ಪಡ್ಡೆಗಳೆಲ್ಲರೂ ಹುಚ್ಚೆದ್ದು ಕುಣಿದರೆ, 'ಕೋಟಿಗೊಬ್ಬ 3' ಸಿನಿಮಾಗಾಗಿ ಸುದೀಪ್ ಅಭಿಮಾನಿಗಳು ಚಿತ್ರಮಂದಿರಗಳ ಎದುರು ಕಾದಿದ್ದೇ ಬಂತು, ಚಿತ್ರ ಬಿಡುಗಡೆಯಾಗಲೇ ಇಲ್ಲ. ಇದು ಇನ್ನೊಂದು ರೀತಿಯಲ್ಲಿ 'ಸಲಗ'ನಿಗೆ ವರವಾಗಿಯೂ ಪರಿಣಮಿಸಿತು.

ಹಣಕಾಸಿನ ಕಾರಣಕ್ಕೆ ಬಿಡುಗಡೆಯಾಗದ 'ಕೋಟಿಗೊಬ್ಬ 3' ಮರುದಿನ ಅಂದರೆ ಅಕ್ಟೋಬರ್ 15ಕ್ಕೆ ಬಿಡುಗಡೆಯಾಯಿತು. ಆದರೆ ಅಷ್ಟರಲ್ಲಾಗಲೇ ಜನರು ಆ ಸಿನಿಮಾ ಬಗ್ಗೆ ಉತ್ಸಾಹ ಕಳೆದುಕೊಂಡಿದ್ದರು. ಅದೇ ವಾರ ಬಿಡುಗಡೆಯಾಗಿದ್ದ ಡಾರ್ಲಿಂಗ್ ಕೃಷ್ಣ ನಾಯಕನಾಗಿ ನಟಿಸಿದ್ದ 'ಶ್ರೀಕೃಷ್ಣ@ಜಿಮೇಲ್. ಕಾಮ್' ಸಿನಿಮಾವೂ ಗೊತ್ತಿಲ್ಲದೆಯೇ ಎತ್ತಂಗಡಿಯಾಯಿತು.

ಅಭಿರುಚಿಯ ದೃಷ್ಟಿಯಿಂದ ಅಷ್ಟೇನೂ ಒಳ್ಳೆಯ ಸಿನಿಮಾ ಅಲ್ಲದ 'ಸಲಗ'ನನ್ನು ಪಡ್ಡೆಗಳೇ ಮುಗಿಬಿದ್ದು ನೋಡಿ ಗೆಲ್ಲಿಸಿದರು. ಚಿತ್ರಮಂದಿರಗಳಲ್ಲಿ ಮತ್ತೆ ಜನಸಂದಣಿ ನೋಡಿ ಗಾಂಧಿನಗರ ಮತ್ತೆ ನಿರಾಳವಾಗಿ ಉಸಿರಾಡಿತು. ಸಲಗನ ಮುಖದ ಗೆಲುವಿನ ನಗೆ, ಚಂದನವನದಲ್ಲಿ ಮತ್ತೆ ಜೀವಸೆಲೆಯನ್ನೂ ಒಸರುವಂತೆ ಮಾಡಿದ್ದು ಸುಳ್ಳಲ್ಲ.

### 'ರತ್ನನ್ ಪ್ರಪಂಚ' ಸೌಂಡು

ಅಕ್ಟೋಬರ್ 22ರಂದು ಅಮೆಜಾನ್ ಪ್ರೈಮ್‌ನಲ್ಲಿ ರೋಹಿತ್ ಪದಕಿ ನಿರ್ದೇಶನದ 'ರತ್ನನ್ ಪ್ರಪಂಚ' ಸಿನಿಮಾ ಬಿಡುಗಡೆಯಾಯಿತು. ಧನಂಜಯ್, ರೇಬಾ ಜಾನ್, ಉಮಾಶ್ರೀ, ಶ್ರುತಿ, ಅಚ್ಯುತ್ ಕುಮಾರ್, ಪ್ರಮೋದ್ ಈ ಸಿನಿಮಾದ ಮುಖ್ಯಭೂಮಿಕೆಯಲ್ಲಿ ನಟಿಸಿದ್ದರು. ಆನ್‌ಲೈನ್ ವೇದಿಕೆಗಳಲ್ಲಿ ಸಾಕಷ್ಟು ಸದ್ದು ಮಾಡಿಕೊಂಡೇ ಬಂದ ಈ ಚಿತ್ರ ಬಿಡುಗಡೆಯ ನಂತರವೂ ಸೋಷಿಯಲ್ ಮೀಡಿಯಾಗಳಲ್ಲಿ, ಅದರಲ್ಲಿಯೂ ವಿಶೇಷವಾಗಿ ಫೇಸ್‌ಬುಕ್‌ನಲ್ಲಿ ಬಿಸಿಬಿಸಿ ಚರ್ಚೆಯನ್ನು ಹುಟ್ಟುಹಾಕಿತು. ಸಾಧಾರಣ ಮೀಡಿಯೋಕರ್ ಸಿನಿಮಾವೊಂದರ ಕುರಿತಾಗಿ ಸೋಷಿಯಲ್ ಮೀಡಿಯಾದಲ್ಲಿ ವಾರಗಟ್ಟಲೆ ನಡೆದ ಚರ್ಚೆ, ಸಿನಿಮಾ ಸಂವಾದ ಎನ್ನುವುದು ಎಷ್ಟು ಕೆಳಮಟ್ಟಕ್ಕೆ ಇಳಿದಿದೆ ಎಂಬುದನ್ನು ಯಾವ